# ಏನೇನೊ ಗಳಿಸರಿತು ಪಡೆದೇನು?

**ಕುಮಾರ ನಿಜಗುಣ**

ಏನೇನೊ ಗಳಿಸರಿತು ಪಡೆದೇನು ಮಾನವನು
ತಾನಾರುಯೆಂಬುದನು ತಿಳಿಯದಿರ್ದೊಡೆಯವನು. ||ಪ||

ಬಾನಿನೊಳು ಹಕ್ಕಿಯೊಲು ಹಾರಾಡೆ ಕಲಿತೇನು
ಕ್ಷೋಣಿಗರ್ಭವ ಬಗೆದು ರತ್ನ ಶೇಖರಿಸೇನು
ಜಾಣ್ಮೆಯೊಳು ಜಲಧಿಯಿಂ ಮುತ್ತು ತಂದೊಡೆಯೇನು
ತಾನಾರುಯೆಂಬುದನು ತಿಳಿಯದಿರ್ದೊಡೆಯವನು ||೧||

ಹಲವಾರು ವಿದ್ಯೆಯೊಳು ನೈಪುಣ್ಯ ಗಳಿಸೇನು
ಇಳೆಯೊಳೆಲ್ಲರನಾಳ್ವ ಪ್ರಾಬಲ್ಯ ಪಡೆದೇನು
ಕಲಹವಿಲ್ಲದೆ ಬಾಳ್ವ ಜಾಣ್ಮೆ ತಾನಿರಲೇನು
ತಿಳಿಯದಾಂತರ್ಯದೊಳು ತಾನಾರುಯೆಂಬುದನು ||೨||

ಚೆಂಗದಿರನೆಡೆಸಾರ್ವ ಚಾತುರ್ಯವಿರಲೇನು
ತಂಗದಿರನೊಳಗಿಳಿದು ಬಂಗಲೆಯ ಕಟ್ಟೇನು
ಮಂಗಳನ ಮಿಗೆ ಪೊಕ್ಕು ಮಣ್ಣ ತಂದೊಡೆಯೇನು
ಮಂಗಮನವಂ ಗೆಲ್ದು ತನ್ನನರಿಯದೆಯವನು ||೩||

ಧಾರಿಣಿಯ ಮೇಲಿವಗೆ ಸಮರಿಲ್ಲವೆನಿಸೇನು
ಮೇರುಕೃತಿಯಂ ರಚಿಸಿ ಕೀರ್ತಿಯಿಂ ಮೆರೆದೇನು
ಚಾರುಮದನನ ಜರಿವ ರೂಪಿದ್ದು ಫಲವೇನು
ಆರು ತಾನೆಂಬುದನು ತಿಳಿಯದಿರ್ದೊಡೆಯವನು ||೪||

ಮೇಲು ಶೋಧನೆಗೈದು 'ಡಾಕ್ಟ್ರೇಟು' ಪಡೆದೇನು
ಜಾಲಾಡಿ ಶಾಸ್ತ್ರಗಳ ಪಾಂಡಿತ್ಯ ಗಳಿಸೇನು
ಕಾಲರಾಪ್ಲೇಗುಗಳ ಹತ್ತಿಕ್ಕಿದೊಡೆಯೇನು
ಬಾಳಿನೊಳು ತಿಳಿಯದಲೆ ತಾನಾರುಯೆಂಬುದನು ||೫||

ಜನಮನವ ತಾ ಗೆಲಿದು ಘನಮಂತ್ರಿಯಾಗೇನು
ಜನರ ಕಣ್ಮಣಿಯೆನಿಸಿ ರಾಷ್ಟ್ರಪತಿಯಾಗೇನು
ಜನರೆಲ್ಲ ಓಲೈಪ ಕಲೆಗಾರನಾಗೇನು
ಅನುಭಾವಕೈದದಲೆ ತಾನಾರುಯೆಂಬುದನು ||೬||

ಅಣುಬಾಂಬುಗಳ ತಡೆವ ಶಕ್ತಿ ತನಗಿರಲೇನು
ಹಣಗಳಿಸಿ ಬಹುವಿಧದಿ ಭೂಧನದನೆನಿಸೇನು
ಹೆಣಗಿ ಹಗಲಿರುಳು ಘನಪದವಿಗೇರಿದೊಡೇನು
ತನಗೆ ತಾನರಿಯದಲೆ ತಾನಾರುಯೆಂಬುದನು ||೭||

ಪಲ್ಲಕ್ಕಿಯೊಳು ಮೆರೆವ ಔನ್ನತ್ಯ ಗಳಿಸೇನು
ಬಲ್ಲಿದನು ತಾನೆನಿಸಿ ಬಿರುದುಗಳ ಪಡೆದೇನು
ಮಲ್ಲಯುದ್ಧದಿ ಜಯಿಸಿ ಮಾರಾಯನೆನಿಸೇನು
ಬಲ್ಮೆಯಿಂದರಿಯದಲೆ ತಾನಾರುಯೆಂಬುದನು||೮||

ರತಿರಂಭೆಯರ ಜರಿವ ಸತಿರತ್ನವಾಂತೇನು
ಸುತಗಣಪಗುಹರಂಥ ಪುತ್ರರಂ ಪಡೆದೇನು
ಶತವೆಂಟುವರುಷಗಳು ಬಾಳಿ ಬದುಕಿದೊಡೇನು
ಗತಿಗಾಣದಿರೆ ತಿಳಿದು ತಾನಾರುಯೆಂಬುದನು ||೯||

> **ವಿಜ್ಞಾನವನ್ನು ಬಲ್ಲವರು ಅನೇಕರು, ಆದರೆ ದೈವೀಪುರುಷರ ಸಂಖ್ಯೆ ಅತ್ಯಲ್ಪ. ನಾವು ಪರಮಾಣುವಿನ ರಹಸ್ಯವನ್ನು ಭೇದಿಸಿದೆವು. ಆದರೆ ಪರ್ವತೋಪದೇಶವನ್ನು ಕಡೆಗಣಿಸಿದೆವು. ಜಗತ್ತು ವಿವೇಕರಹಿತ ಬುದ್ಧಿತೀಕ್ಷ್ಣತೆಯನ್ನೂ ಪ್ರಜ್ಞಾಹೀನ ಶಕ್ತಿಯನ್ನೂ ಪಡೆದಿದೆ. ಶಾಂತಿಯ ಬಗೆಗಿಂತ ಯುದ್ಧದ ಬಗ್ಗೆ ನಮಗೆ ಹೆಚ್ಚು ತಿಳಿದಿದೆ. ಬಾಳುವುದಕ್ಕಿಂತ ಕೊಲ್ಲುವುದರಲ್ಲೇ ನಾವು ನಿಪುಣರು.**
>
> ***—ಜನರಲ್ ಒಮರ್ ಬ್ರಾಡ್ಲೀ.***